

# ವಲಸೆ ಹಕ್ಕಿಗಳು

ನಿನ್ನೂರಿನ ನಕಾಶೆ ಹಿಡಿದು
ಮನೆದಾರಿಯ ಹುಡುಕುವ ಬದಲು
ಉಸಿರ ದಾರಿ ಹಿಡಿದು ಸಾಗಿದ್ದರೆ
ಸೇರಬಹುದಿತ್ತು ಎಂದೋ ನಿನ್ನೆದೆಯ

ನನ್ನ ಶ್ವಾಸಕ್ಕೊಂದು
ಪ್ರೇಮದಾವಾಸವ ಕಟ್ಟಿ, ಬೊಗಸೆ ತುಂಬಿ
ಸೊಗಸು ಸವಿಯಬಹುದಿತ್ತು

ನೀನು ಆ ರಾತ್ರಿಸುಖದ
ಅಣುವೊಂದರಿಂದ
ಸಿಡಿದುಹೋದ ಶನಿಗ್ರಹ
ಸುತ್ತಲೂ ಸುತ್ತಿರುವ ಬಳೆ
ಕಂಬನಿಗತ್ತಲು ಹೊಳೆ!



ಬಟ್ಟಲಗಣ್ಣ ಕಕ್ಷೆಯಲ್ಲಿ
ನೆನಪುಗಳ ಧೂಮಕೇತು
ಮೌನ–ಮಾತುಗಳ ರಾಹುಕೇತು
ಈಗ ಸುಖವೊಂದು ಸೂರ್ಯಗ್ರಹಣ!

ಆ ಅಮಾವಾಸ್ಯೆಯೆಂದು ಚಂದ್ರನನ್ನು
ಭೂಮಿಗೆ ಕರೆಯಬಾರದಿತ್ತು ನೀನು

ನಾನು ಆ ಮಧುಬಟ್ಟಲ
ಕೊನೆಯ ಹನಿಯನು
ನಿನ್ನ ತುಟಿಗೆ ಸವರಿದ್ದರೆ

ಆ ವಾಸನೆಯ ಉಸುರುತ್ತ
ಮಲ್ಲಿಗೆ ಬಳ್ಳಿಯಂತೆ ಮೈಚಾಚಿ
ನಿನ್ನ ಮಗುವಿನ ಗುಲಾಬಿಪಾದವನ್ನು
ಚುಂಬಿಸಬಹುದಿತ್ತು

ಇರಲಿ ಬಿಡು ಗೆಳತಿ
ಸುಖಕ್ಕೊ, ಸಂತಾನಕ್ಕೊ
ಹಕ್ಕಿಗಳು ವಲಸೆ ಹೋಗುತ್ತವಂತೆ.

● **ಮಹಾಂತೇಶ ಪಾಟೀಲ**

ಕಲೆ: ವಾಗೀಶ ಹೆಗಡೆ